(SRI H. SIDDAVEERAPPA)

The details of spray are as follows :—

Date of commencement	Number of villages	Number of houses targetted	Number of houses Sprayed	Date of completion	Percentage of coverage
		I Round			
6-3-73	228 main+ villages 160 Dalks villages	(29317 HD+ 9951 CS)	(20981 HD 9153 CD)	17-4-73	71% HD 92% CS
		II Round			
4-6-73	do	(29085 HD +10570 CS)	(21300 HD 9688 CS)	26-7-73	67% HD 95% CS
		III Round			
16-8-73	do	(30214 HD +11518 CS)	(20100 HD 10595 CS)	21-10-73	66% HD 92% CS

NOTE :—HD - Human Dwellings.
CS - Cattle Sheds.

(v) 6,879 malaria cases have been radically treated.

(c) Adequate drugs have been supplied and steps to control the malaria has been taken in Chicknayakanahally Taluk. 1,39,600 tablets of 8 Aminoquinolines have been supplied to Chicknayakanahalli P.H.C. during the year 1973 for treatment of malaria cases.

CALLING ATTENTION TO MATTERS OF URGENT PUBLIC IMPORTANCE.

(i) Re.—Lathi Charge on Beedi Workers in Udipi.

Sri B. V. KAKKILAYA (Bantwal).—

I call the attention of the Hon. Chief Minister to the Lathi charge on beedi workers of M/s. Home Industrial Ltd, Udipi.

Sri H. M. CHANNABASAPPA (Minister for Public Works and Electricity).—

In replay to the above calling attention notice, I make the following statement :—

South Kanara Home Industries with its Head Quarters at Mulky is having one of its branches at Kunjibettu, Udipi. The firm is manufacturing beedies on behalf of M/s. Mangalore Ganesh Beedies through its contractors after supplying them with Raw Materials. Mangalore Ganesh Beedies in turn sells the beedies so supplied as its own product. With the recent passing of the beedies and Cigar workers (conditions of Employment) (Mysore) Rules 1969, the Employer is required to obtain a licence for the premises and provide amenities and other facilities to beedi rollers. Dispute between the Management of South Kanara, Home Industries and its contractors arose over the issue of obtaining premises ilcence which both parties are not prepared to do. This dispute reached a climax on the refusal by the South Kanara Home Industries to supply raw materials to its contractors resulting in the Beedi Rollers being thrown out of employment on 28th February 1974. About 400 workers including some contractors staged a stay in strike inside the Depot premises of the firm demanding that the Management should apply for the licenses on their behalf holding themselves liable to the fulfilment of the requirements of the Rules. The contractors and the labourers would not move out of the Office permises even after closing hours and constituted a danger to the premises and the Godown. Hence 17 agitators were taken into custody and put inside the waiting Police Van. The riotous agitators blocked the movement of the Police Van by lying on the road. Several warnings to disperse having had no effect a mild cane charge was resorted to. In all 20 persons including those who lay across on the road were arrested and a case in Cr. No. 39—74 under section 94 M.P. Act and 341 IPC. has been registered against them in Udipi Town Police Station. The arrested persons refused to offer bail. On 1st March 1974 they were produced before the Local Court and were released on bail. The three lady agitators sustained minor injuries as a result of cane charge and have undergone treatment in Government Hospital Udipi. Relay Sathyagraha by batches (10) is also being staged by the labourers (demanding supply of raw materials) in the Udipi taluk office premises. The Management is evading conciliation meeting convened by the labour Department, situation is reported to be peaceful.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಮಂತ್ರಿಗಳ ಹೇಳಿಕೆಯನ್ನು ನಾವು ಪೂರ್ತಿಯಾಗಿ ಓದಿದರೆ ಅದರಲ್ಲಿ ಮಾಲೀಕರು ಮತ್ತು ಕಂಟ್ರಾಕ್ಟರ್‌ಗಳು ಕೆಲಸಗಾರರಿಗೆ ಕೊಡಬೇಕಾದ ಸವಲತ್ತುಗಳನ್ನು ಯಾರು ಕೊಡಬೇಕೆಂಬ ಬಗ್ಗೆ ವಿವಾದ ಬಂದಿರುವುದು ಕಾಣುತ್ತದೆ. ಅವರು ನಮಗೆ ಕೆಲಸಕೊಡಿ ಎಂದು ಕೇಳುವುದಕ್ಕೆ ಹೋದಾಗ ಅವರನ್ನು ಪೋಲೀಸಿನವರು ಹೊಡೆದಿದ್ದಾರೆ. ಮೂರ ಜನ ಮಹಿಳೆಯರನ್ನು ಗಾಯಮಾಡಿದ್ದಾರೆ. ಅಲ್ಲಿ ಕೆಲಸಕ್ಕೆ ಹೋದವರಿಗೆ ಹಿಂಸಾಕೃತ್ಯ ಮಾಡಿದ ಬಗ್ಗೆ ಮಾನ್ಯ ಮಂತ್ರಿಗಳ ಹೇಳಿಕೆಯಲ್ಲಿ ಏನನ್ನೂ ಹೇಳಲಿಲ್ಲ. ನಾನು ಅಲ್ಲಿಗೆ

(ಶ್ರೀ ಬಿ. ಎ. ಕಕ್ಕಿರಾಯ)

ಹೋಗಿದ್ದೆ. ನಿಜವಾಗಿ ಮೂರು ಜನ ಮಹಿಳೆಯರಿಗೆ ಗಾಯವಾಗಿದೆ. ಇದು ಸತ್ಯ. ನಾನು ಪ್ರತ್ಯಕ್ಷವಾಗಿ ನೋಡಿಕೊಂಡು ಬಂದಿದ್ದೇನೆ. ಇಲ್ಲಿ ಮಾನ್ಯ ಮಂತ್ರಿಗಳು ಬರೀ ಹೇಳಿಕೆಯನ್ನು ಕೊಡುವುದಕ್ಕೆ ಬದಲಾಗಿ ಉನ್ನತ ಪೋಲೀಸ್ ಅಧಿಕಾರಿಗಳು ಅಂದರೆ ಎಸ್.ಪಿ. ಅವರ ಮೂಲಕ ಅಲ್ಲಿರತಕ್ಕ ಗೋಡಾನ್ ಬಗ್ಗೆ ಸ್ವಲ್ಪಮಟ್ಟಿಗೆ ವಿಚಾರಣೆ ನಡೆಯಬೇಕು. ಮಾಲೀಕರಿಗೆ ಇರತಕ್ಕ ಸಹಕಾರ್ಯಗಳನ್ನು ತಪ್ಪಿಸುವುದಕ್ಕೊಸ್ಕರ ಈ ರೀತಿ ಮಾಡಿದ್ದಾರೆಂದು ನನಗೆ ಭಾಸವಾಗುತ್ತದೆ. ಆದ್ದರಿಂದ ಪೋಲೀಸ್ ಅಧಿಕಾರಿಗಳ ಮೂಲಕ ತಾವು ಇದರ ಬಗ್ಗೆ ವಿಚಾರಣೆ ನಡೆಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಇದೇನು ಭಾಷಣವೇ ? ಮಾನ್ಯ ಸದಸ್ಯರು ಕಾಲ್ ಅಟೆನ್ಷನ್ ನೋಟೀಸ್ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕು. ಹೆಚ್ಚು ಹೊತ್ತು ಭಾಷಣ ಮಾಡುವಂತೆ ಕ್ಲಾರಿಫಿಕೇಷನ್ ಕೇಳಬಾರದು.

ಶ್ರೀ ಎಜ್. ಎಂ. ಚನ್ನಬಸಪ್ಪ.—ಪೋಲೀಸಿನವರು ಕ್ರಮ ತೆಗೆದುಕೊಂಡಿದ್ದು ಲಾ ಅಂಡ್ ಆರ್ಡರ್ ದೃಷ್ಟಿಯಿಂದ. ಮಾನ್ಯ ಸದಸ್ಯರು ತಿಳಿಯಬೇಕು, ಅವರ ಹತ್ತಿರಕ್ಕೆ ಒಂದೇ ಸಾರಿ 50 ಜನ ಬಂದು ನಾವು ಹೋಗುವುದೇ ಇಲ್ಲವೆಂದು ಹೇಳಿದರೆ, ಆಗ ಏನು ಮಾಡುತ್ತಾರೆಂಬುದನ್ನು ಹೇಳಬೇಕು. ಹಾಗೆಯೇ ಇಲ್ಲಿ ನಡೆದಿರುವುದು. ಇದು ಇಂಡಸ್ಟ್ರಿಯಲ್ ಕನ್ಸರ್ನ್. 5 ಗಂಟೆಯ ಮೇಲೆ ಬಾಗಿಲು ಹಾಕುವುದಕ್ಕೆ ಅವಕಾಶ ಕೊಡದೇ ಇದ್ದುದರಿಂದಲೇ ಲಾ ಅಂಡ್ ಆರ್ಡರ್ ಜಾರಿ ಮಾಡಬೇಕಾಯಿತು. ಕಾನೂನು ಪ್ರಕಾರವಾಗಿ ಅಲ್ಲಿ ರಕ್ಷಣೆ ಕೊಡುವುದು ಪೋಲೀಸರ ಜವಾಬ್ದಾರಿ ಇದೆ. ಆ ರೀತಿಯಾಗಿ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಹೇಳಿದಹಾಗೆ ಯಾರು ಲೈಸೆನ್ಸ್ ತೆಗೆದು ಕೊಳ್ಳಬೇಕೆಂಬುದರಲ್ಲಿ ವಿವಾದವೇನೋ ಇದೆ. ನಿಜ. ಅದನ್ನು ಗಣೇಶ ಬೀಡಿಯವರು ತೆಗೆದುಕೊಳ್ಳಬಹುದು, ಸೌತ್ ಕೆನರಾ ಹೊಂ ಇಂಡಸ್ಟ್ರೀಸ್ ಅವರು ತೆಗೆದು ಕೊಳ್ಳಬಹುದು, ಕಂಟ್ರಾಕ್ಟರ್ ತೆಗೆದುಕೊಳ್ಳಬಹುದು, ಅಥವಾ ಯಾರು ಅದನ್ನು ಮ್ಯಾನುಫ್ಯಾಕ್ಚರ್ ಮಾಡುತ್ತಾರೋ ಅವರು ತೆಗೆದುಕೊಳ್ಳಬಹುದು ಈ ನಾಲ್ಕು ಜನರ ಪೈಕಿ ಕಾನೂನು ರೀತ್ಯ ಯಾರು ಲೈಸೆನ್ಸ್ ತೆಗೆದುಕೊಂಡು ಮಾಡಬೇಕೆಂಬ ಬಗ್ಗೆ ವಿಚಾರಮಾಡಿ ಸರ್ಕಾರದ ಮಟ್ಟದಲ್ಲಿ ಸೂಕ್ತ ಕ್ರಮವನ್ನು ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡೋಣ. ಇನ್ನೊಂದು ವಿಷಯ. ರೂಲ್ 27 ಓದಿ ನೋಡಿದರೆ ಅರ್ಥವಾಗುತ್ತದೆ. ಅದರಲ್ಲಿ

> "27. Any dispute between an Employer and an Employee or employees in relation to the issue of the employment or raw material to the employee the rejection of the employees of of the Beedies or cigars or b th..... may be referred in writing by the employer or the employee to the Inspector of the area."

ಎಂದು ಹೇಳಿದ್ದಾರೆ. ಕಚ್ಚಾ ಮಾಲು ಕೊಡಲಿಲ್ಲವೆನ್ನುವ ವಿವಾದ ಬಂತು. ವಿವಾದ ಬಂದರೆ ಇನ್ಸ್‌ಪೆಕ್ಟರಿಗೆ ಅರ್ಜಿ ಕೊಡಬೇಕು ಮತ್ತು ಅವರು ಅದರ ಬಗ್ಗೆ ತೀರ್ಮಾನ ಮಾಡಿದ ಮೇಲೆ ಬೇಕಾದರೆ ಅಪೀಲು ಹೋಗುವುದಕ್ಕೆ ಕಾನೂನು ರೀತ್ಯ ಅವಕಾಶವಿದೆ. ಆದರೆ ಹಾಗೆ ಮಾಡಲಿಲ್ಲ. ದಬ್ಬಾಳಿಕೆಯನ್ನು ನಡೆಸಿದರು. ಇಂಥ ಸಂದರ್ಭದಲ್ಲಿ ರಕ್ಷಣೆಯನ್ನು ಪೋಲೀಸಿನವರು ಕೊಡ ಬೇಕಾದ್ದು ಸರಿ ಎಂದು ಮಾನ್ಯ ಸದಸ್ಯರೂ ಒಪ್ಪಬೇಕು.

2-00 P.M.

ಶ್ರೀ ಎಂ. ಎಸ್. ಕೃಷ್ಣನ್.—ಲೇಬರ್ ಇಲಾಖೆ ವಿವಾದವನ್ನು ಇತ್ಯರ್ಥ ಮಾಡಬೇಕು ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳ ಹೇಳಿಕೆಯಲ್ಲು ಕೂಡ ಹೇಳಿದ್ದಾರೆ. ಲೇಬರ್ ಡಿಪಾರ್ಟ್‌ಮೆಂಟಿನವರು ಕರೆದಿದ್ದರೂ ಸಹ ಮಾಲೀಕರುಗಳು ಯಾರೂ ಕನ್‌ಸೀಲಿಯೇಷನ್ನಿಗೆ ಬರುತ್ತಿಲ್ಲ ವೆಂದು ಹೇಳಿದ್ದಾರೆ. ಇಂಥ ಸಂದರ್ಭಗಳಲ್ಲಿ ಪ್ರಿನ್ಸಿಪಲ್ ಎಂಪ್ಲಾಯರ್ ಅವರದು ಜವಾಬ್ದಾರಿ ಇದೆ ಎನ್ನುವ ಇಂಟರ್‌ಪ್ರಿಟೇಷನ್ ಇರುವುದರಿಂದ, ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಕೇಳಿ ಯಾರು ಲೈಸೆನ್ಸ್ ತಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿರುವ ಮೂರು ನಾಲ್ಕು ಜನರ ಹೆಸರಿಗೆ ಯಾರು ಪ್ರೀಮಿಯಸ್‌ಗೆ ಲೈಸೆನ್ಸ್ ತೆಗೆದುಕೊಳ್ಳಬೇಕು ಎನ್ನುವ ವಿಚಾರದಲ್ಲಿ ಕಾನೂನು ವಿಭಾಗದಲ್ಲಿ ವಿಚಾರ ಮಾಡಿ ಸರ್ಕಾರದ ಮಟ್ಟದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ ಎಂದು ಸ್ಪಷ್ಟವಾಗಿ ಹೇಳಿದ್ದೇನೆ.

(*ii*) *re*: **Nonpayment of Compensation to the families of the deceased in the accident at Narian Iron and Maganesa works**

ಶ್ರೀ ಸಿ. ಬೈರೇಗೌಡ (ಬೆಮಗಲ್). —ಚಿತ್ರದುರ್ಗ ಜಿಲ್ಲೆಯ ನಾರಾಯಣ್ ಕಬ್ಬಿಣ ಹಾಗೂ ಮ್ಯಾಂಗನೀಸ್ ಗಣಿಯಲ್ಲಿ ನಡೆದ ಅಪಘಾತ ಮತ್ತು ಕಾಂಪನ್ಸೇಷನ್ ಕೊಡದೆ ಇರುವ ವಿಚಾರದಲ್ಲಿ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

Shri H. M. CHANNABASAPPA.—

Madam in reply to the above calling attention notice, I beg to state as :—

On 4th February 1974 about 2.00 p.m. the deceased viz., Pujari Obalappa while going to his village Megalahally about 15 miles South West of Bharmasagar Police Station after attending to his work in Narain Mines fell into a pit of about 6 feet deep, accidentally. The pit is by the side of a motorable road leading to the Narain Mines.

To the East—There is a motorable road ;

To the West—There is a Katcha road ;

To the South—There is a land of Jagir Basappa.

To the North—Land of Ex. Chairman Thumballappa ;

After falling into the pit, he sustained injuries on his face and there were blood-stains in the pit. The wife of the deceased viz., Hanumakka, with the help of others, managed to get the injured removed to her house, but the injured died while undergoing treatment in his house at Megalahally. On 5th February 1974 at 8-30 p.m. Smt. Hanumakka reported the matter to the Police. The case at Bharmasagar Police Station Crime No. 11-74 under section 174 Cr.P.C. is registered. It is still under investigation. After examining the blood-relatives and other witnessess, it was clear that the death was due to accidental fall and no foul-play is suspected. Body was subjected to post-mortem and the opinion of the Medical Officer, Bharmasagar is to the effect that death is due to fall from height.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಹೇಳಿಕೆಯಲ್ಲಿ ಆರು ಅಡಿ ಆಳದ ಹಳ್ಳಕ್ಕೆ ಬಿದ್ದು ಸತ್ತ ಎಂದು ಹೇಳಿದ್ದಾರೆ. ಆರು ಅಡಿ ಹಳ್ಳಕ್ಕೆ ಬಿದ್ದರೆ ಯಾರಾದರೂ ಸಾಯುತ್ತಾರೆಯೇ ಎನ್ನುವುದು ನನ್ನ ಅನುಮಾನ. ಅಲ್ಲಿ ವಾಸ ಮಾಡಿರುವುದೇನೆಂದರೆ, ಕಬ್ಬಿಣದ ಅದಿರು ತೆಗೆಯುತಕ್ಕ ಗಣಿ ಡೈಲಾಪ್ ಮೈಡೇಷಿಡ್ ಕಂಡೀಷನ್‌ನಲ್ಲಿದ್ದು ಗಣಿಯಲ್ಲಿ ಕೆಲಸ ಮಾಡುವವರ ಸೇಫ್ಟಿದೃಷ್ಟಿಯಿಂದ ಅಲ್ಲಿ ಕೆಲಸ ಮಾಡಿಸಬಾರದೆಂದು ತಿಳಿಸಿದ್ದಾರೆ. ಅಂಥಹದೆ ಕೆಲಸಗಾರರನ್ನು ಹಾಕಿ ಕೆಲಸ ಮಾಡಿಸುತ್ತಿದ್ದಾಗ ಗೋಡೆ ಕುಸಿದು ಬಿದ್ದು ಕಾರ್ಮಿಕ ಮೃತನಾಗಿದ್ದಾನೆ. ಗಣಿಯಲ್ಲಿ ಸತ್ತ